**1 ನೇ ಹೆಚ್ಚುವರಿ ವಿಶೇಷ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಚಿಕ್ಕಮಗಳೂರು**

**ಸ್ಪೆಷಲ್ ಮೊಕದ್ದಮೆ ನಂಃ 24/2022**

| | | |
|---|---|---|
| ಸಾಕ್ಷಿದಾರರ ಹೆಸರು | - ಚಂದ್ರಶೇಖರ್.ಕೆ.ಬಿ. | ಪಿಡಬ್ಲೂ - 07 |
| ತಂದೆಯ ಹೆಸರು | - ಭದ್ರೇಗೌಡ | ಸಿಡಬ್ಲೂ - 12 |
| ವಯಸ್ಸು | - 48 ವರ್ಷ | |
| ಉದ್ಯೋಗ | - ದಾಸರಹಳ್ಳಿ ಗ್ರಾಮ ಪಂಚಾಯ್ತಿಯ ಸೆಕ್ರಟರಿ | |
| ವಾಸ ಸ್ಥಳ | - ಚಿಕ್ಕಮಗಳೂರು | |

ದಿನಾಂಕಃ 01.12.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

*(ಆರೋಪಿಯು ನ್ಯಾಯಾಂಗ ಬಂದನದಲ್ಲಿದ್ದು, ಆತನನ್ನು ಈ ದಿನ Google meet ನಲ್ಲಿ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಕಾರಾಗೃಹದಿಂದ ಹಾಜರುಪಡಿಸಲಾಗಿರುತ್ತದೆ. ಸಾಕ್ಷಿಯ ವಿಚಾರಣೆಯನ್ನು ದಾಖಲಿಸುವ ಮೊದಲು ಆರೋಪಿಗೆ ಸಾಕ್ಷಿ ಮಾತನಾಡುವುದು ಸರಿಯಾಗಿ ಕೇಳಿಸುತ್ತಿದೆ ಮತ್ತು ವಿಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಸಾಕ್ಷಿಯ ವಿಚಾರಣೆಯನ್ನು ದಾಖಲಿಸಲು ಯಾವುದೇ ತಾಂತ್ರಿಕ ಸಮಸ್ಯೆ ಇಲ್ಲವೆಂದು ಖಾತ್ರಿಪಡಿಸಿಕೊಳ್ಳಲಾಯಿತು.)*

ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ-

1. ನಾನು ಹಿರೇಕೊಳಲೆ ಗ್ರಾಮ ಪಂಚಾಯ್ತಿಯಲ್ಲಿ ಬಿಲ್ ಕಲೆಕ್ಟರ್ ಆಗಿ 2001 ರಿಂದ ಮಾರ್ಚ್ 2024 ರವರೆಗೆ ಕೆಲಸ ಮಾಡಿದ್ದೆನು.

2. ಈ ದಿನ ವಿಡಿಯೋ ಕಾನ್ಫರೇನ್ಸಿಂಗ್ ಮುಖಾಂತರ ಹಾಜರು ಪಡಿಸಿದ ಆರೋಪಿ ಗೊತ್ತು. ಸಹಪಂಚರಾದ ಚಾಸಾ.13 ಗೊತ್ತು. ದಿಃ 20-11-2021 ರಂದು ನಾನು ಹಿರೇಕೊಳಲೆ ಗ್ರಾಮ ಪಂಚಾಯ್ತಿ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೆನು. ಆಗ ಚಿಕ್ಕಮಗಳೂರು ಗ್ರಾಮಾಂತರ ಪೊಲೀಸರು ನಮ್ಮ ಕಛೇರಿಗೆ ಬಂದು ನಮ್ಮ ಪಂಚಾಯ್ತಿ ಅಭಿವೃದ್ದಿ ಅಧಿಕಾರಿಗಳನ್ನು ಸಂಪರ್ಕಿಸಿ ಕಬ್ಬಿನಹಳ್ಳಿ ಗ್ರಾಮದ ರಮೇಶಗೌಡರವರ ಕಬ್ಬಿನಹಳ್ಳಿ ಎಸ್ಟೇಟ್ ಕೂಲಿ ಲೈನ್ ಮನೆಯಲ್ಲಿ ಆಗಿದ್ದ ಒಂದು ಕೊಲೆಗೆ ಸಂಬಂಧಿಸಿದಂತೆ ಮಹಜರ್ ಜರುಗಿಸಲು ಕೊಲೆಯಾದ ಸ್ಥಳಕ್ಕೆ ಸಾಕ್ಷಿದಾರರಾಗಿ ಬಂದು ಸಹಕರಿಸುವಂತೆ ನನಗೆ ನೋಟೀಸನ್ನು ಕೊಟ್ಟರು. ಸದರಿ ನೋಟೀಸನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನೋಟೀಸ್ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ನೋಟೀಸನ್ನು ನಿಪಿ.14 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.14(ಎ) ಎಂದು ಗುರುತಿಸಲಾಯಿತು. ಅದೇ ರೀತಿ ನಮ್ಮ ಕಛೇರಿಯ ಪಕ್ಕದಲ್ಲಿದ್ದ ಗ್ರಂಥಾಲಯದಲ್ಲಿ ಮೇಲ್ವಿಚಾರಕರಾಗಿ ಕೆಲಸ ಮಾಡುತ್ತಿದ್ದ ಚಾಸಾ.13 ರವರಿಗೂ ಸಹ ಸದರಿ ನೋಟೀಸನ್ನು ಕೊಟ್ಟು ಕರೆದರು.

3. ಆ ದಿನ ಪೊಲೀಸರು ಬಂದಿದ್ದ ಜೀಪಿನಲ್ಲಿ ಈ ದಿನ ವಿಡಿಯೋ ಕಾನ್ಫರೇನ್ಸಿಂಗ್ ಮುಖಾಂತರ ಹಾಜರಿರುವ ಆರೋಪಿ ಇದ್ದನು. ಪೊಲೀಸರು ನನ್ನನ್ನು ಮತ್ತು ಚಾಸಾ.13 ರವರನ್ನು ತಮ್ಮ ಜೀಪಿನಲ್ಲಿ ಕರೆದುಕೊಂಡು ಹೋದರು. ಜೀಪಿನಲ್ಲಿದ್ದ ಆರೋಪಿ ನಮ್ಮನ್ನು ಮೇಲೆ ಹೇಳಿದ ಕಬ್ಬಿನಹಳ್ಳಿ ಗ್ರಾಮದ ರಮೇಶಗೌಡರವರ ಕಬ್ಬಿನಹಳ್ಳಿ ಎಸ್ಟೇಟ್ ಕೂಲಿ ಲೈನ್ ಮನೆಗೆ ಕರೆದುಕೊಂಡು ಹೋಗಿ ಅಲ್ಲಿ

ಕೊಲೆಯಾಗಿದ್ದ ಸ್ಥಳವನ್ನು ತೋರಿಸಿದನು. ಮನೆಯ ಹಿಂಭಾಗದಲ್ಲಿದ್ದ ಸೂರಿನ ಕೆಳಭಾಗದಲ್ಲಿ ಒಂದು ಚೀಲದಲ್ಲಿ ಇಟ್ಟಿದ್ದ ಮರದ ಹಿಡಿಯಿರುವ ಒಂದು ಕತ್ತಿ ಮತ್ತು ಕೆಂಪು ಬಣ್ಣದ ಪ್ಲಾಸ್ಟಿಕ್ ಹಿಡಿ ಇದ್ದ ಒಂದು ಚಾಕುವನ್ನು ತೆಗೆದು ತೋರಿಸಿ ಅದೇ ಕತ್ತಿಯಿಂದ ಮೃತನಿಗೆ ಹೊಡೆದಿದ್ದಾಗಿ ಮತ್ತು ಚಾಕುವಿನಿಂದ ಚುಚ್ಚಿದ್ದಾಗಿ ತಿಳಿಸಿದನು. ಮನೆಯ ಹಿಂಭಾಗದಲ್ಲಿ ಒಂದು ಬಚ್ಚಲು ಮನೆ ಇದ್ದು, ಸದರಿ ಬಚ್ಚಲು ಮನೆಯ ಬಾಗಿಲಿನ ಹಿಂಭಾಗದಲ್ಲಿ ಒಂದು ಬ್ಯಾಗಿನಲ್ಲಿದ್ದ ಒಂದು ಶರ್ಟು ಮತ್ತು ಪ್ಯಾಂಟನ್ನು ಆರೋಪಿ ತೆಗೆದು ಅವುಗಳನ್ನು ತಾನು ಕೊಲೆ ಮಾಡಿದ ಸಂದರ್ಭದಲ್ಲಿ ಧರಿಸಿದ್ದಾಗಿ ತಿಳಿಸಿ ಪೊಲೀಸರಿಗೆ ಹಾಜರು ಪಡಿಸಿದನು. ಸದರಿ ಶರ್ಟು ಬಿಸ್ಕೇಟ್ ಬಣ್ಣದ್ದಾಗಿತ್ತು ಮತ್ತು ತುಂಬು ತೋಳಿನ ಶರ್ಟಾಗಿತ್ತು. ಸದರಿ ಪ್ಯಾಂಟು ಕಂದು ಬಣ್ಣದ್ದಾಗಿತ್ತು. ಅವುಗಳ ಮೇಲೆ ರಕ್ತದ ಕಲೆಗಳಿರುವುದು ಕಂಡುಬಂತು. ಆ ಬಗ್ಗೆ ಸ್ಥಳದಲ್ಲಿ ಪೊಲೀಸರು ಮಧ್ಯಾಹ್ನ 12.30 ಗಂಟೆಯಿಂದ ಮಧ್ಯಾಹ್ನ 2.30 ಗಂಟೆಯವರೆಗೆ ಮಹಜರ್ ಜರುಗಿಸಿ ಮೇಲೆ ಹೇಳಿದ ಕತ್ತಿ, ಚಾಕು ಮತ್ತು ಬಟ್ಟೆಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ಸದರಿ ಮಹಜರಿಗೆ ನಾನು, ಚಾಸಾ.13, ಆರೋಪಿ ಮತ್ತು ಪೊಲೀಸರು ಸಹಿ ಮಾಡಿದ್ದೇವೆ. ಸದರಿ ಮಹಜರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಮಹಜರ್ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಮಹಜರನ್ನು ನಿ.ಪಿ.15 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.15(ಎ) ಎಂದು ಗುರುತಿಸಲಾಯಿತು.

4. ಮೇಲೆ ಹೇಳಿದ ವಸ್ತುಗಳನ್ನು ಪೊಲೀಸರು ಸೀಲ್ ಮಾಡಿಕೊಂಡು ನಮ್ಮ ಸಹಿಗಳನ್ನು ಪಡೆದುಕೊಂಡರು. ಅವುಗಳನ್ನು ನೋಡಿದರೆ

ಗುರುತಿಸುತ್ತೇನೆ. ಸಾಕ್ಷಿ ಈಗಾಗಲೇ ಮು.ಮಾ.8 ಮತ್ತು ಮು.ಮಾ.9 ಎಂದು ಗುರುತಿಸಲ್ಪಟ್ಟಿರುವ ಕತ್ತಿ ಮತ್ತು ಚಾಕುವನ್ನು ನೋಡಿ ಆ ದಿನ ಆರೋಪಿ ಕೃತ್ಯಕ್ಕೆ ಬಳಸಿದ್ದಾಗಿ ತಿಳಿಸಿ ಹಾಜರು ಪಡಿಸಿದ ಕತ್ತಿ ಮತ್ತು ಚಾಕು ಅವೇ ಎಂದು ನುಡಿದಿರುತ್ತಾರೆ. ಮು.ಮಾ.8 ಮತ್ತು 9 ರ ಮೇಲೆ ಅಂಟಿಸಲಾಗಿರುವ ಚೀಟಿಗಳಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ಮು.ಮಾ.8(ಎ) ಮತ್ತು ಮು.ಮಾ.9(ಎ) ಎಂದು ಗುರುತಿಸಲಾಯಿತು.

5. ಸಾಕ್ಷಿಯು ಒಂದು ಮಾಸಲು ಬಿಸ್ಕೇಟ್ ಬಣ್ಣದ ತುಂಬು ತೋಳಿನ ಶರ್ಟು ಮತ್ತು ಕಂದು ಬಣ್ಣದ ಪ್ಯಾಂಟನ್ನು ನೋಡಿ ಗುರುತಿಸಿ ಆ ದಿನ ಆರೋಪಿ ಕೃತ್ಯವೆಸಗಿದ ಸಮಯದಲ್ಲಿ ತಾನು ಧರಿಸಿದ್ದ ಬಟ್ಟೆಗಳು ಎಂದು ನುಡಿದು ಹಾಜರು ಪಡಿಸಿದ ಬಟ್ಟೆಗಳು ಅವೇ ಎಂದು ನುಡಿದಿರುತ್ತಾರೆ. ಸದರಿ ಶರ್ಟು ಮತ್ತು ಪ್ಯಾಂಟನ್ನು ಕ್ರಮವಾಗಿ ಮು.ಮಾ.10 ಮತ್ತು ಮು.ಮಾ.11 ಎಂದು ಗುರುತಿಸಲಾಯಿತು. ಸಾಕ್ಷಿಯು ಮು.ಮಾ.10 ಮತ್ತು 11 ರ ಮೇಲೆ ಅಂಟಿಸಲಾಗಿರುವ ಚೀಟಿಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ಮು.ಮಾ.10(ಎ) ಮತ್ತು ಮು.ಮಾ.11(ಎ) ಎಂದು ಗುರುತಿಸಲಾಯಿತು.

(ಈ ದಿನ ಮುದ್ದೆ ಮಾಲು 10 ಮತ್ತು 11 ಎಂದು ಗುರುತಿಸಲ್ಪಟ್ಟ ವಸ್ತುಗಳನ್ನು ಪ್ಯಾಕ್ ಮಾಡಿ ಎಫ್ ಎಸ್ ಎಲ್ ಸೀಲು ಮಾಡಲಾಗಿದ್ದು, ಅವುಗಳನ್ನು ಈ ದಿನ ತೆರೆದ ನ್ಯಾಯಾಲಯದಲ್ಲಿ ಆರೋಪಿ, ಆತನ ಪರ ವಕೀಲರು ಮತ್ತು

ಸರ್ಕಾರಿ ಅಭಿಯೋಜಕರ ಸಮಕ್ಷಮ ತೆರೆದು ಸಾಕ್ಷಿಗೆ ತೋರಿಸಲಾಗಿರುತ್ತದೆ.)

6. ಮಹಜರ್ ಸಮಯದಲ್ಲಿ ಪೊಲೀಸರು ಫೋಟೋಗಳನ್ನು ತೆಗೆದುಕೊಂಡರು, ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ 6 ಫೋಟೋಗಳನ್ನು ತೋರಿಸಲಾಗಿ, ಅವುಗಳನ್ನು ಮೇಲೆ ಹೇಳಿದ ಸ್ಥಳದಲ್ಲಿ ಪೊಲೀಸರು ಮಹಜರ್ ಜರುಗಿಸುವ ಸಮಯದಲ್ಲಿ ತೆಗೆದಿದ್ದಾಗಿ ನುಡಿದಿರುತ್ತಾರೆ. ಸದರಿ ಫೋಟೋಗಳನ್ನು ನಿಪಿ.16 ರಿಂದ ಪಿ.21 ಎಂದು ಗುರುತಿಸಲಾಯಿತು. ನಿಪಿ.16 ಮತ್ತು ಪಿ.17 ಫೋಟೋಗಳಲ್ಲಿ ಕೃತ್ಯ ನಡೆದ ಮನೆಯ ಮುಂದಿನ ಮತ್ತು ಹಿಂದಿನ ಭಾಗ ಕಂಡುಬರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ. ನಿಪಿ.18 ಫೋಟೋದಲ್ಲಿ ಕೃತ್ಯ ನಡೆದ ಮನೆಯ ಹಿಂಭಾಗದಲ್ಲಿದ್ದ ಸೂರಿನ ಕೆಳಗೆ ಅಂದರೆ ಹೆಂಚಿನ ಕೆಳಗೆ ಚೀಲದಲ್ಲಿ ಇರಿಸಿದ್ದ ಕತ್ತಿ ಮತ್ತು ಚಾಕುವನ್ನು ಆರೋಪಿ ತೆಗೆಯುತ್ತಿರುವುದು ಕಂಡುಬರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ.

7. ನಿಪಿ.19 ಫೋಟೋದಲ್ಲಿ ಬಚ್ಚಲು ಮನೆಯ ಬಾಗಿಲಿನ ಹಿಂಭಾಗದಲ್ಲಿ ಇರಿಸಿದ್ದ ಬ್ಯಾಗಿನಲ್ಲಿದ್ದ ಶರ್ಟು ಮತ್ತು ಪ್ಯಾಂಟನ್ನು ಆರೋಪಿ ತೆಗೆಯುತ್ತಿರುವುದು ಕಂಡುಬರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ. ನಿಪಿ.20 ಮತ್ತು ಪಿ.21 ರಲ್ಲಿ ತನ್ನ ಚಾಸಾ.15, ಆರೋಪಿ ಮತ್ತು ಪೊಲೀಸರ ಇರುವಿಕೆ ಮತ್ತು ಆರೋಪಿ ಹಾಜರು ಪಡಿಸಿದ ಮುದ್ದೆಮಾಲುಗಳು ಕಂಡುಬರುವುದಾಗಿ ಸಾಕ್ಷಿ ನುಡಿದಿರುತ್ತಾರೆ.

<u>ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ಐ.ಎಸ್.ಟಿ. ವಕೀಲರ ಪರವಾಗಿ ಶ್ರೀ ಎಸ್.ಕೆ.ಎಂ. ವಕೀಲರಿಂದಃ-</u>

8. ನಿಮ್ಮ ಕಛೇರಿಯಿಂದ ಯಾವುದೇ ವಿಶೇಷ ಕೆಲಸದ ಮೇರೆಗೆ ಹೊರಗೆ ಹೋಗಬೇಕಾದರೆ ನಿರ್ದಿಷ್ಟವಾದ ಪ್ರಕ್ರಿಯೆ ಇರುತ್ತದೆ ಎಂದರೆ ಸರಿ. ನಿಮ್ಮ ಕೆಲಸದ ಅವಧಿ ನಿರ್ದಿಷ್ಟವಾಗಿರುತ್ತದೆ ಎಂದರೆ ಸರಿ. ಪೊಲೀಸರು ಜರುಗಿಸುವ ಮಹಜರಿಗೆ ಅಥವಾ ತನಿಖೆಗೆ ಸಹಕರಿಸುವುದು ನಿಮ್ಮ ಕೆಲಸದ ಪರಿಮಿತಿಯಲ್ಲಿ ಬರುವುದಿಲ್ಲ ಎಂದರೆ ಸರಿ. ಆ ದಿನ ನಾನು ಮಹಜರಿಗೆ ಸಹಕರಿಸಲೆಂದು ರಜೆಯನ್ನು ಪಡೆದಿಲ್ಲ. ಸಾಕ್ಷಿ ಮುಂದುವರೆದು ಪಿ.ಡಿ.ಒ. ರವರ ಮೌಖಿಕ ಅನುಮತಿಯ ಮೇರೆಗೆ ಹೋಗಿದ್ದೆನು ಎನ್ನುತ್ತಾರೆ. ಆ ದಿನ ಪೂರ್ತಿ ದಿನದ ಸಂಬಳವನ್ನು ನಾನು ಪಡೆದಿದ್ದೇನೆ.

9. ಆ ದಿನ ಪೊಲೀಸರು ನಿರ್ದಿಷ್ಟವಾಗಿ ನನ್ನನ್ನು ಹುಡುಕಿಕೊಂಡು ಬಂದಿರಲಿಲ್ಲ. ಪೊಲೀಸರು ನಮ್ಮ ಕಛೇರಿಗೆ ಬಂದಾಗ ಸಮಯ ಬೆಳಿಗ್ಗೆ 11.30 ಗಂಟೆಯಾಗಿತ್ತು. ಪೊಲೀಸರು ನಿಮ್ಮ ಪಿ.ಡಿ.ಒ. ರವರೊಂದಿಗೆ ಏನು ಮಾತನಾಡಿದ್ದಾರೆ ಎಂದು ನಿಮಗೆ ಗೊತ್ತಿಲ್ಲ ಎಂದರೆ ಸರಿ. ಅವರು ಸುಮಾರು 20 ನಿಮಿಷಗಳವರೆಗೆ ಮಾತನಾಡಿದರು. ನಂತರ ಪಿ.ಡಿ.ಒ. ರವರು ನನ್ನನ್ನು ಕರೆದು ಮಾಹಿತಿಯನ್ನು ನೀಡಿ ಪಂಚರಾಗಿ ಹೋಗಿ ಸಹಕರಿಸಿ ಎಂದು ತಿಳಿಸಿದರು. ಪಿ.ಡಿ.ಒ. ರವರೇ ಪೊಲೀಸರ ಜೊತೆ ಇಂತಹ ಜಾಗಕ್ಕೆ ಹೋಗಿ ಎಂದು ತಿಳಿಸಿದ್ದರು ಎಂದರೆ ಸರಿ. ಅದರಂತೆ ನೀವು ಸ್ಥಳಕ್ಕೆ ಹೋಗಿದ್ದೀರಿ ಎಂದರೆ ಸರಿ. ಪೊಲೀಸರೇ ನಿಮ್ಮನ್ನು ಸ್ಥಳಕ್ಕೆ ಕರೆದುಕೊಂಡು ಹೋಗಿದ್ದಾರೆ ಎಂದರೆ ಸರಿ. ಪೊಲೀಸರು ಇಂತಹ ಸ್ಥಳಕ್ಕೆ ಬರಬೇಕೆಂದು ನಿಮಗೆ ಮೊದಲೇ ಬರವಣಿಗೆಯಲ್ಲಿ

ಕೊಟ್ಟಿದ್ದರೇ ಎಂದರೆ ಸಾಕ್ಷಿ ಹೌದು ನಮ್ಮ ಕಛೇರಿಯಲ್ಲೇ ಕೊಟ್ಟಿದ್ದರು ಎನ್ನುತ್ತಾರೆ. ಆ ದಿನ ನಾನು ಕಛೇರಿಯಿಂದ ಹೊರಡುವ ಬಗ್ಗೆ ಲೆಡ್ಜರ್ ನಲ್ಲಿ ನಮೂದು ಮಾಡಿಲ್ಲ, ಆದರೆ ಪಿ.ಡಿ.ಒ. ರವರಿಗೆ ತಿಳಿಸಿದ್ದೇನೆ.

10. ಕಬ್ಬಿನಹಳ್ಳಿಯಲ್ಲಿ ಸುಮಾರು 70 ರಿಂದ 80 ವಾಸದ ಮನೆಗಳಿವೆ. ನೀವು ಹೋದ ಸ್ಥಳದ ಸರ್ವೆ ನಂಬರನ್ನು ಹೇಳಲಾಗುತ್ತದೆಯೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನೀವು ಸ್ಥಳಕ್ಕೆ ಹೋದಾಗ ಪೊಲೀಸರು ಟೇಪ್ ನ್ನು ಹಾಕಿ ಸ್ಥಳವನ್ನು ಸಂರಕ್ಷಿಸಿರುವುದು ಕಂಡುಬಂತ್ತೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಸದರಿ ಮನೆಯ ಬಾಗಿಲನ್ನು ಹಾಕಲಾಗಿತ್ತು, ಆದರೆ ಅದಕ್ಕೆ ಬೀಗವನ್ನು ಹಾಕಿರಲಿಲ್ಲ. ಆ ಸಮಯದಲ್ಲಿ ಪೊಲೀಸರು ಯಾರಾದ್ದಾದರುಾ ಹೇಳಿಕೆಯನ್ನು ದಾಖಲಿಸಿದ್ದರೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

11. ನಿಪಿ.17 ಫೋಟೋವನ್ನು ತೋರಿಸಿ ಅದನ್ನು ಯಾವಾಗ ತೆಗೆಯಲಾಯಿತು ಎಂದು ನಿಮಗೆ ಗೊತ್ತೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಸದರಿ ಫೋಟೋದಲ್ಲಿ ಮನೆಯ ಬಾಗಿಲು ತೆರೆದಿರುವುದು ಕಂಡುಬರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾವು ಹೋದಾಗ ತೆರೆದಿರಲಿಲ್ಲ ಎನ್ನುತ್ತಾರೆ. ಸದರಿ ಫೋಟೋದಲ್ಲಿ ಕಂಡುಬರುವ ಮನೆಗೆ ಯಾರು ಬೇಕಾದರು ಹೋಗುವಂತಹ ಸ್ಥಳ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದು ರಮೇಶಗೌಡರವರ ಸ್ವಂತ ಜಾಗ ಅಲ್ಲಿಗೆ ಯಾರು ಬರುವುದಿಲ್ಲ ಎನ್ನುತ್ತಾರೆ. ನಾನು ಬಿಲ್ ಕಲೇಕ್ಟರ್ ಆಗಿದ್ದ ಕಾರಣ ಅದು ರಮೇಶಗೌಡರಿಗೆ ಸೇರಿದ ಜಾಗ ಎಂದು ಗೊತ್ತು.

12. ಆ ದಿನ ಪೊಲೀಸರು ಆರೋಪಿಗೆ ಬೇಡಿಯನ್ನು ಹಾಕಿ ಕರೆತಂದಿದ್ದರೆ ಎಂದರೆ ಸಾಕ್ಷಿ ಒಂದು ಕೈಗೆ ಹಾಕಿದ್ದರು ಎನ್ನುತ್ತಾರೆ. ಪೊಲೀಸರು ಆರೋಪಿಯನ್ನು ಕರೆದುಕೊಂಡು ಮುಂದೆ ಮುಂದೆ ಹೋಗುತ್ತಿದ್ದರು ಎಂದರೆ ಸರಿ. ಮು.ಮಾ.8 ಮತ್ತು ಮು.ಮಾ.9 ರನ್ನು ಇರಿಸಿದ್ದು ಪ್ಲಾಸ್ಟಿಕ್ ಚೀಲವಾಗಿತ್ತು. ಅದರ ಮೇಲೆ ಯಾವುದಾದರೂ ವಿಶೇಷವಾದ ಗುರುತುಗಳು ಕಂಡುಬಂದವೇ ಎಂದರೆ ಸಾಕ್ಷಿ ನಾನು ಗಮನಿಸಿಲ್ಲ ಎನ್ನುತ್ತಾರೆ.

13. ಕೃತ್ಯ ನಡೆದ ಮನೆಯ ಅಜುಬಾಜಿನಲ್ಲಿ ಯಾರು ಇರಲಿಲ್ಲ, 2 ರಿಂದ 3 ಲೈನ್ ದಾಟಿದ ಬಳಿಕ ಇದ್ದ ಮನೆಗಳಲ್ಲಿ ಅಸ್ಸಾಂನಿಂದ ಬಂದವರು ಇದ್ದರು. ಅವರನ್ನು ಪೊಲೀಸರು ವಿಚಾರಿಸಿದರೇ ಎಂದರೆ ಸಾಕ್ಷಿ ನನ್ನ ಸಮಕ್ಷಮ ವಿಚಾರಿಸಿಲ್ಲ ಎನ್ನುತ್ತಾರೆ. ಪೊಲೀಸರು ಅವರಿಗೆ ಆರೋಪಿಯನ್ನು ತೋರಿಸಿ ಅವರ ಹೇಳಿಕೆಗಳನ್ನು ಪಡೆದುಕೊಂಡರೇ ಎಂದರೆ ಸಾಕ್ಷಿ ನನ್ನ ಸಮಕ್ಷಮ ಮಾಡಿಲ್ಲ ಎನ್ನುತ್ತಾರೆ. ಸದರಿ ಮನೆಯಲ್ಲಿ ಎಷ್ಟು ಬಾತ್ರೂಮುಗಳು ಇದ್ದವು ಎಂದರೆ ಸಾಕ್ಷಿ ನಾನು ನೋಡಿದಂತೆ ಒಂದು ಬಾತ್‌ರೂಂ ಇತ್ತು ಎನ್ನುತ್ತಾರೆ. ಸದರಿ ಬಾತ್‌ರೂಂ ಕಾಮನ್ ಬಾತ್‌ರೂಂ ಎಂದರೆ ಸಾಕ್ಷಿ ಕೃತ್ಯ ನಡೆದ ಮನೆಗೆಂದು ಇದ್ದ ಬಾತ್‌ರೂಂ ಅದು ಎನ್ನುತ್ತಾರೆ. ಬಾತ್ ರೂಂನಲ್ಲಿ ಮು.ಮಾ.10 ಮತ್ತು 11 ನ್ನು ಬ್ಯಾಗಿನಲ್ಲಿ ಇರಿಸಿದ್ದಾಗಿ ಹೇಳಿದ್ದೀರಿ ಆ ಬಗ್ಗೆ ಮಹಜರಿನಲ್ಲಿ ಏನು ಬರೆದಿದೆ ಎಂದು ಗಮನಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಸದರಿ ಬ್ಯಾಗಿನಲ್ಲಿ ಏನಾದರೂ ವಿಶೇಷ ಗುರುತು ಕಂಡುಬಂತೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

14. ಸ್ಥಳದ ಚಕ್ಕುಬಂಧಿಯ ಬಗ್ಗೆ ಪೊಲೀಸರು ಮಹಜರಿನಲ್ಲಿ ಏನು ನಮೂದಿಸಿದ್ದಾರೆ ಎಂದು ತಿಳಿದಿದೆಯೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಪೊಲೀಸರು ಶರ್ಟನ್ನು ಅಮಾನತು ಪಡಿಸಿಕೊಂಡಿದ್ದಾಗಿ ಹೇಳಿದ್ದೀರಿ ಅದು ಯಾವ ಕಂಪನಿಗೆ ಸೇರಿದ್ದು ಮತ್ತು ಅದು ಅದರ ಸೈಜ್ ಹೇಳಲಾಗುತ್ತದೆಯೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಿಮ್ಮ ಸಮಕ್ಷಮ ಮು.ಮಾ.10 ಮತ್ತು ಮು.ಮಾ.11 ಬಟ್ಟೆಗಳು ಆರೋಪಿಗೆ ಸಂಬಂಧಿಸಿದ್ದು ಎಂದು ಸುತ್ತಮುತ್ತಲಿನವರನ್ನು ಕೇಳಿ ಪೊಲೀಸರು ಮಾಹಿತಿ ಪಡೆದುಕೊಂಡರೆ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಮು.ಮಾ.10 ಶರ್ಟು ಪ್ರಿಂಟ್ಸ್ ಇರುವಂತಹ ಕ್ರೀಂ ಕಲರ್ ಶರ್ಟು ಎಂದರೆ ಸರಿ. ಸಾಕ್ಷಿ ಮುಂದುವರೆದು ಅದು ಬಿಸ್ಕೇಟ್ ಬಣ್ಣದ ಶರ್ಟು ಎನ್ನುತ್ತಾರೆ. ಪೊಲೀಸರು ಪ್ಯಾಂಟನ್ನು ಅಮಾನತು ಪಡಿಸಿಕೊಂಡಿದ್ದಾಗಿ ಹೇಳಿದ್ದೀರಿ ಅದು ಯಾವ ಕಂಪನಿಗೆ ಸೇರಿದ್ದು ಮತ್ತು ಅದು ಅದರ ಸೈಜ್ ಹೇಳಲಾಗುತ್ತದೆಯೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

15. ಮು.ಮಾ.8 ಮತ್ತು 9 ಎಂದು ಗುರುತಿಸಲ್ಪಟ್ಟಿರುವ ಕತ್ತಿ ಮತ್ತು ಚಾಕುವಿನಂತಹ ವಸ್ತುಗಳು ಸಾಮಾನ್ಯವಾಗಿ ಎಲ್ಲಾ ರೈತರ ಮತ್ತು ಎಸ್ಟೇಟ್ ಮಾಲೀಕರ ಮನೆಗಳಲ್ಲಿ ಇರುತ್ತವೆ ಎಂದರೆ ಸರಿ. ಅವುಗಳ ಮೇಲೆ ನೀವು ಯಾವುದಾದರೂ ವಿಶೇಷವಾದ ಗುರುತುಗಳನ್ನು ಕಂಡಿರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

16. ಮಹಜರನ್ನು ಪೊಲೀಸರು ಬರೆದಿದ್ದಾರೆ, ಆದರೆ ಅವರ ಹೆಸರು ಮತ್ತು ಹುದ್ದೆ ನನಗೆ ಗೊತ್ತಿಲ್ಲ. ಆ ದಿನ ಪೊಲೀಸರು ನನ್ನ ಸಮಕ್ಷಮ ಯಾವುದೇ ವ್ಯಕ್ತಿಯ ಹೇಳಿಕೆಯನ್ನು ಪಡೆದಿಲ್ಲ ಮತ್ತು ಅದಕ್ಕೆ ನನ್ನ ಸಹಿ ಪಡೆದಿಲ್ಲ. ಪೊಲೀಸರು ನಿಮಗೆ ಮತ್ತು ಚಾಸಾ.13

ರವರಿಗೆ ನಿಪಿ.14 ರಂತೆ ನೋಟೀಸ್ ನ್ನು ಜಾರಿ ಮಾಡಿದ್ದರು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನೀವು ಪೊಲೀಸರೊಂದಿಗೆ ಜೀಪಿನಲ್ಲಿ ಹೊರಟಿದ್ದಾಗಿ, ಅದರಲ್ಲಿ ಆರೋಪಿ ಇದ್ದಿದ್ದಾಗಿ, ಆತ ನಿಮ್ಮನ್ನು ಕಬ್ಬಿನಹಳ್ಳಿಯ ರಮೇಶಗೌಡರವರ ಎಸ್ಟೇಟಿನ ಕೂಲಿಲೈನ್ ಮನೆಗೆ ಕರೆದುಕೊಂಡು ಹೋಗಿ ಸ್ಥಳವನ್ನು ತೋರಿಸಿದ್ದಾಗಿ, ಮು.ಮಾ.8, 9, 10 ಮತ್ತು 11 ನ್ನು ಹಾಜರು ಪಡಿಸಿದ್ದಾಗಿ, ಅವುಗಳನ್ನು ನಿಪಿ.15 ರಂತೆ ಪಂಚನಾಮೆಯನ್ನು ಜರುಗಿಸಿ ಅಮಾನತು ಪಡಿಸಿಕೊಂಡಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಮು.ಮಾ.8 ಮತ್ತು 9 ರ ಉದ್ದ ಅಗಲದ ಬಗ್ಗೆ ಮಹಜರಿನಲ್ಲಿ ಏನು ವಿವರವನ್ನು ಬರೆಯಲಾಗಿದೆ ಎಂದು ಹೇಳಲಾಗುತ್ತದೆಯೇ ಎಂದರೆ ಸಾಕ್ಷಿ ನೆನಪಿಲ್ಲ ಎನ್ನುತ್ತಾರೆ.

17. ನಿಮ್ಮ ಸ್ವಂತ ಊರು ಕಬ್ಬಿನಹಳ್ಳಿ ಎಂದರೆ ಸರಿ. ಹಾಗಾಗಿ ಚಾಸಾ.14 ರಮೇಶಗೌಡರವರು ಮತ್ತು ನೀವು ಆತ್ಮೀಯರಾಗಿದ್ದೀರಿ ಎಂದರೆ ಸರಿಯಲ್ಲ. ದಿಃ 20-11-2021 ರಂದು ನೀವು ಕಛೇರಿಯಲ್ಲಿಯೇ ಕರ್ತವ್ಯವನ್ನು ನಿರ್ವಹಿಸಿ ಪೊಲೀಸರ ಕೋರಿಕೆಯ ಮೇರೆಗೆ ನಿಮ್ಮ ಕಛೇರಿಯಲ್ಲಿಯೇ ನಿಪಿ.14 ಮತ್ತು ಪಿ.15 ದಾಖಲೆಗಳಿಗೆ ಸಹಿ ಮಾಡಿದ್ದೀರಿ ಹೊರತು ನಿಮಗೆ ಬೇರೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನಿಮ್ಮ ಪಿ.ಡಿ.ಒ. ರವರ ಒತ್ತಾಯದ ಮೇರೆಗೆ ಸದರಿ ದಾಖಲೆಗಳಿಗೆ ಸಹಿ ಮಾಡಿದ್ದೀರಿ ಎಂದರೆ ಸರಿಯಲ್ಲ. ನಿಪಿ.16 ರಿಂದ ಪಿ.21 ಫೋಟೋಗಳು ಕೃತ್ಯ ನಡೆದಿದೆ ಎನ್ನಲಾದ ಸ್ಥಳಕ್ಕೆ ಸಂಬಂಧಿಸಿದಲ್ಲ ಎಂದರೆ ಸರಿಯಲ್ಲ. ಸದರಿ ಫೋಟೋಗಳನ್ನು ಪ್ರಕರಣಕ್ಕೆ ಅನುಕೂಲವಾಗುವಂತೆ ಸೃಷ್ಟಿಸಿ ಹಾಜರು ಪಡಿಸಲಾಗಿದೆ ಎಂದರೆ ಸರಿಯಲ್ಲ. ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿರುವ

ಎಲ್ಲಾ ವಿಚಾರಗಳು ಸುಳ್ಳಿನಿಂದ ಕೂಡಿದೆ ಎಂದರೆ ಸರಿಯಲ್ಲ. ಪೊಲೀಸರ ಮತ್ತು ನಿಮ್ಮ ಮೇಲಾಧಿಕಾರಿಗಳ ಮಾತನ್ನು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ಆರೋಪಿಯನ್ನು ನ್ಯಾಯಾಲಯದಲ್ಲಿಯೇ ಮೊದಲ ಬಾರಿಗೆ ನೋಡಿರುವುದು ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ.</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ